

ಮುಕಾಮಿ ಬಾಗಿಲ ಬಳಿ ನಿಂತಳು: ನಿಧಾನವಾಗಿ ಮತ್ತು ದುಃಖಭರಿತಳಾಗಿ ತಲೆಯನ್ನು ತಿರುಗಿಸಿ ಅಡುಗೆ ಒಲೆಯ ಕಡೆ ನೋಡಿದಳು. ಒಂದು ಕ್ಷಣದ ಅನುಮಾನ. ಧಗಧಗಿಸುತ್ತಿದ್ದ ಬೆಂಕಿ ಹಾಗೂ ಅದರ ಪಕ್ಕದ ಚಿಕ್ಕ ಕುರ್ಚಿ ಅವಳನ್ನು ಮರಳಿ ಕರೆಯುತ್ತಿತ್ತು. ಇಲ್ಲ. ಅವಳಾಗಲೇ ಮನಸ್ಸು ಮಾಡಿದ್ದಳು. ಹೋಗಲೇಬೇಕು. ತನ್ನ ಮೃದುವಾದ ಮೇಲು ಹೊದಿಕೆಯನ್ನು ತಲೆ ಮೇಲೆ ಬಿಗಿಯಾಗಿ ಎಳೆದುಕೊಂಡಳು. ತನ್ನ ಕಿರಿದಾದ, ತಾರುಣ್ಯದ ಭುಜದ ಮೇಲೆ ಅದನ್ನು ಹಾಕಿಕೊಂಡು, ಒಂಟಿಯಾಗಿ ಕಗ್ಗತ್ತಲೆಯಲ್ಲೇ ಮುನ್ನುಗ್ಗಿದಳು.

ಎಲ್ಲಾ ಕಡೆ ಪ್ರಶಾಂತ ಮೌನ, ಒಂದು ರೀತಿಯ ಮೋಡಿ ಆವರಿಸಿತ್ತು. ಆದರೂ ಅದು ಬೆದರಿಸುತ್ತಿರುವಂತೆ ಭಾಸವಾಯಿತು. ಕಣ್ಣಿಗೆ ಕಾಣದ, ಭಾಸವಾಗದ, ಸುತ್ತುವರಿದ ಕಗ್ಗತ್ತಲ ಅಗಾಧತೆಯಿಂದ ಅವಳು ಗಾಬರಿಗೊಂಡಳು. ಬೇಗನೆ ಪರಿಚಿತವಾದ ಹಜಾರದ ಮೂಲಕ, ಸ್ವಲ್ಪವೂ ಶಬ್ದ ಮಾಡದಂತೆ ಮುನ್ನಡೆದಳು. ನಾಲ್ಕು ಗುಡಿಸಲಿನ ಪಕ್ಕದ ಆ ಹಜಾರವು – ತನ್ನ ಆ ಮನುಷ್ಯನ ಮುಖಭಾವ ಹಾಗೂ ಅವಳದ್ದೇ ಆದ ಆ ಗುಡಿಸಲು, ಒಟ್ಟುಗೂಡಿ ತನ್ನ ಕ್ರಿಯೆಯ ಮೌನ ಖಂಡನೆಗೆ ಕೈ ಜೋಡಿಸಿತ್ತು.

‘ನೀನು ನಿನ್ನ ಪತಿಯನ್ನು ಬಿಟ್ಟು ಹೋಗುತ್ತಿದ್ದೀಯೆ. ಮರಳಿ ಬಾ!’ – ಅವರು ಅನುಕಂಪ ಮಿಶ್ರಿತ ತಿರಸ್ಕಾರದಿಂದ ಕೇಳಿಕೊಂಡರು. ಸ್ವಲ್ಪ ಉಡಾಫೆಯಿಂದಲೇ ಅವಳು ಹಜಾರವನ್ನು ದಾಟಿ ಎಡಗಡೆಯ ಕದದ ಕಡೆ ಇಳಿದಳು. ನಿಧಾನವಾಗಿ, ಕದ ತೆರೆದು ಮತ್ತೆ ಮುಚ್ಚಿದಳು. ಒಂದು ಕ್ಷಣ ನಿಂತಳು, ಮತ್ತು ಆ ಕ್ಷಣದಲ್ಲಿಯೇ ಮುಕಾಮಿ ತನ್ನ ಅಸ್ತಿತ್ವದ ಒಂದು ಭಾಗವನ್ನು ಮುಚ್ಚಿಬಿಡುತ್ತಿದ್ದೇನೆಂದು ಮನವರಿಕೆ ಮಾಡಿಕೊಂಡಳು. ಅವಳ ಭಾರವಾದ ಹೃದಯದೊಂದಿಗೆ, ಕಣ್ಣೀರೂ ಸಹ ಸುರಿಯುತ್ತಿತ್ತು. ಅದಕ್ಕೆ ಬೆನ್ನು ಮಾಡಿ ಮುಂದೆ ಹೊರಟೇಬಿಟ್ಟಳು.

ಆದರೆ, ಅವಳು ಎಲ್ಲಿಗೆ ತಾನೇ ಹೋಗುತ್ತಿದ್ದಳು? ಅವಳಿಗೇ ಗೊತ್ತಿರಲಿಲ್ಲ, ಅಲ್ಲದೆ, ಅದರ ಬಗ್ಗೆ ಎಚ್ಚರವಹಿಸಿರಲಿಲ್ಲ. ಅವಳಿಗೆ ಏನಿದ್ದರೂ ತಪ್ಪಿಸಿಕೊಂಡು ಹೋಗಬೇಕಾಗಿತ್ತು. ಹೋಗಬೇಕು ಎಲ್ಲಿಗಾದರೂ – ಮಸ್ಪೈಲಾ ಅಥವಾ ಯುಖಾಂಬನಿ. ಅವಳು ಆ ಬೆಂಕಿಯ ಒಲೆಯಿಂದ, ಹಜಾರ, ಗುಡಿಸಲುಗಳು ಮತ್ತೇ ಆ ಜನ, ಅವಳಿಗೆ ನೆನಪು ತರುತ್ತಿದ್ದ ಮುಹೋರಿನಿ ಪರ್ವತ ಮತ್ತು ಅಲ್ಲಿಯ ಜನಗಳಿಂದ ದೂರ ಹೋಗಬೇಕಾಗಿತ್ತು. ಹೋಗಿ ಮತ್ತೊಮ್ಮೆ ಬಾರದ ಹಾಗೇ, ತನ್ನ ಪತಿ – ಅಲ್ಲ, ಅವನು ತನ್ನ ಪತಿ ಅಲ್ಲ, ಆದರೆ, ತನ್ನನ್ನು ಸಾಯಿಸಬಯಸಿದ್ದ, ಅವಳ ಆತ್ಮವನ್ನೇ ಹಿಸುಕಲು ಸಿದ್ಧನಾಗಿದ್ದವನಿಂದ ದೂರ ಹೋಗಬೇಕಾಗಿತ್ತು. ಅವನು ಇನ್ನೂ ಪತಿಯಾಗಿರಲು ಸಾಧ್ಯವಿಲ್ಲ, ಅದೇ ಮನುಷ್ಯ ಅವಳಿಂದ ಇಲ್ಲಿಯವರೆಗೆ ಪ್ರಶಂಸೆಗೆ ಒಳಗಾಗಿದ್ದವನು. ಈಗ ಅವಳ ದ್ವೇಷಕ್ಕೆ ತುತ್ತಾಗಿದ್ದಾನೆ.

ಅವಳ ತಲೆಯ ತುಂಬಾ ಅವನದೇ ಯೋಚನೆ. ಅವಳ ಕರುಣಾಪೂರಿತ ವೈವಾಹಿಕ ಜೀವನ: ಅವಳ ಪತಿ ಮುಥೋಗ, ಕಷ್ಟದಿಂದ ಮೇಲೆ ಬಂದವನು, ತನ್ನ ನಾಲ್ವರು ಪತ್ನಿಯರನ್ನು ಭಯಾನಕವಾಗಿ ನೋಡಿಕೊಂಡವನೆಂಬ ಅಪಕೀರ್ತಿಗೆ ಪಾತ್ರನಾಗಿದ್ದವನು. ಅವಳನ್ನು, ಅವನ ಕೈಗೆ ಅವಳ ತಂದೆ ಒಪ್ಪಿಸಲು ಅನುಮಾನಪಟ್ಟಿದ್ದ, ಅಲ್ಲದೇ ಅವನ ಬೈಗುಳಗಳನ್ನು ಕೇಳಿಸಿಕೊಳ್ಳಲು ಇವಳು ನಿರಾಕರಿಸಿದ್ದಳು. ಮುಥೋಗ ಅವಳ ಮೇಲೆ ಸಂಮೋಹನ ಮಾಡಿದ್ದನು. ಅವಳಿಗೆ ಅವನು ಬೇಕಾಗಿತ್ತು, ಅವನ ಹೆಂಡತಿ ಮಕ್ಕಳ ಸಾಲಿನಲ್ಲಿ ಸೇರಬೇಕೆಂದು ಅಪೇಕ್ಷೆ ಪಟ್ಟಿದ್ದಳು. ನಿಜಕ್ಕೂ ಅವಳು ಬಂದಾಗಿನಿಂದ ಅವನನ್ನು ರಹಸ್ಯವಾಗಿ, ಆದರೆ ನಿರ್ಣಾಯಕವಾಗಿ ಅವನನ್ನು ಇಷ್ಟಪಟ್ಟಿದ್ದಳು – ಅವನ ನಡವಳಿಕೆ, ಅವನ ಕುಣಿತ, ಎಲ್ಲಕ್ಕಿಂತ ಹೆಚ್ಚಾಗಿ ಅವನ ಇಂಪಾದ ಧ್ವನಿ ಮತ್ತು ಆಟಗಾರನ ಹುಟ್ಟು. ಅವನ ಪ್ರಭಾವಳಿಯಲ್ಲಿ ಇದ್ದುದೆಲ್ಲವೂ ನಿಗೂಢ ಮತ್ತು ದರ್ಪವನ್ನು ಸೂಚಿಸುತ್ತಿತ್ತು. ಅಲ್ಲದೆ ಅವರ ಪ್ರೇಮದಾಟ ಕಡಿಮೆ ಅವಧಿಯಲ್ಲೇ ವಿಚಿತ್ರವಾಗಿತ್ತು. ತನ್ನ ಹೃದಯ ಹೊಡೆದುಕೊಳ್ಳುತ್ತಿದ್ದುದನ್ನು ಅವಳು ಇನ್ನೂ ನೆನಪಿಸಿಕೊಳ್ಳುತ್ತಿದ್ದಳು, ಅವನ ವಿಶಾಲ ನಗೆ ಹಾಗೂ ಅವನು ನೀಡಿದ ಮದುವೆ ಉಡುಗೊರೆಯ ಸಂಕೇತವಾದ ಸಿಂಪಿಯ ಮುತ್ತು, ಅದರ ನಂತರ ನಡೆದದ್ದು ಬೀರ್ ಕುಡಿತ ಹಾಗೂ ಸಾಂಪ್ರದಾಯಿಕ ವಧುದಕ್ಷಿಣೆ.

ಆದರೆ, ಜನಗಳು ಅದನ್ನು ನಂಬಲೇ ಇಲ್ಲ. ಅವಳು ತಿರಸ್ಕರಿಸಿದ್ದ ಅನೇಕ ತರುಣ ಯೋಧರು ಅವಳ ಕಡೆ ತಿರಸ್ಕಾರ ಮತ್ತು ಕೋಪದಿಂದ ನೋಡುತ್ತಿದ್ದರು. ‘ಓ! ಇಂತಹ ಸೌಂದರ್ಯ ಮತ್ತು ಯೌವನವನ್ನು ಆ ಮುದುಕನಿಗೆ ಧಾರೆ ಎರೆಯುವುದೇ’ ಎಂದು ಅನೇಕರು ಮೆಲು ಧ್ವನಿಯಲ್ಲಿ ಹೇಳಿದ್ದು ಅವಳ ಮೇಲೆ ಇವನು ಏನೋ ಮೋಡಿ ಮಾಡಿದ್ದಾನೆ ಎಂದು. ನಿಜಕ್ಕೂ ಹಾಗೆಯೇ ಆಗಿತ್ತು: ಅವಳ ಹೃದಯ ಅವನಿಗಾಗಿಯೇ ಮಿಡಿದಿತ್ತು. ಅವಳಿಗೆ ಸದಾ ನೆನಪು ಮತ್ತು ಸಂವೇದನೆಯನ್ನು ಉಂಟು ಮಾಡುತ್ತಿದ್ದ ದಿನವೆಂದರೆ, ಅವನ ಗುಡಿಸಲಿಗೆ ಅವಳನ್ನು ಕರೆದುಕೊಂಡು ಹೋಗಿದ್ದು, ಅವಳಿಗಾಗಿ ವಿಶೇಷವಾಗಿ ನಿರ್ಮಿಸಲಾಗಿದ್ದ ಗುಡಿಸಲು, ಶಾಂಭಾಗೆ ಹೋಗುತ್ತಿದ್ದಾಗ, ಆಶ್ಚರ್ಯವೆಂಬಂತೆ ಮೂವರು ವ್ಯಕ್ತಿಗಳು ಎಲ್ಲಿಂದಲೋ ಬಂದು ಎದುರಿಗೆ ನಿಂತರು. ಆಗ ಅವಳಿಗೆ ಗೊತ್ತಾಯಿತು. ಅವಳಿಗಾಗಿಯೇ ಅವರು ಬಂದಿದ್ದರು ಎಂದು. ಅವಳು ಅದನ್ನಾಗಲೇ ತಿಳಿದುಕೊಳ್ಳಬೇಕಾಗಿತ್ತು, ಅದಕ್ಕೆ ಸಿದ್ಧಳಾಗಬೇಕಿತ್ತು.

ಅವಳ ಮದುವೆಯ ದಿನ ಸಮೀಪಿಸಿತ್ತು. ಯಾವುದೇ ಮುನ್ಸೂಚನೆ ಇಲ್ಲದೆ ಅವರು ಅವಳನ್ನು ಎತ್ತಿಕೊಂಡಾಗ, ಒಂದು ಕ್ಷಣ ಅವಳು ಭಯಭೀತಳಾಗಿ, ಬಿಡಿಸಿಕೊಳ್ಳಲು ತನ್ನ ಮೃದುವಾದ ಕೈಗಳಿಂದಲೇ ಗುದ್ದಾಟ ಮಾಡಿದ್ದಳು. ಮತ್ತೆ ಅವರು ಆ ಗಂಡಸರು! ಅವರು ಅವಳ ಹುಚ್ಚು ಹೋರಾಟವನ್ನು ಪೂರ್ತಿ ನಿರ್ಲಕ್ಷಿಸಿದ್ದರು. ಅವರಲ್ಲೊಬ್ಬ ಅವಳ ಕೆನ್ನೆಯನ್ನು ಹಿಂಡಿದ, ಅವಳನ್ನು ಸುಮ್ಮನಾಗಿಸಲು. ಅದು ಅವಳಿಗೆ ವಿಚಿತ್ರವಾದ ಗಾಬರಿಯನ್ನುಂಟು ಮಾಡಿತು. ಈಗ ಬಿಡಿಸಿಕೊಳ್ಳುವುದನ್ನು ನಿಲ್ಲಿಸಿದಳು. ಮತ್ತೆ ಮೊದಲಬಾರಿಗೆ ಅವನ ಹೆಗಲ ಮೇಲಿನಷ್ಟು ಎತ್ತರ ಹೋಗಿದ್ದಳು, ಅವರುಗಳು ಎತ್ತಿಕೊಂಡು ಹೋದಾಗ. ಒಂದು ರೀತಿಯಲ್ಲಿ ಸಂತೋಷವಾದರೂ ತಕ್ಷಣ, ಮನವರಿಕೆ ಮಾಡಿಕೊಂಡಳು, ತನ್ನ ಪತಿಯ ಮನೆಯವರೆಗೂ ಒಂದು ವಾರಪೂರ್ತಿ ಉತ್ಸುಕಳಾಗಿಯೇ ಇರಬೇಕು ಎಂದುಕೊಂಡಳು.

ಮೊದಲನೆಯ ಋತು: ಅವನ ಎಲ್ಲಾ ಪ್ರೀತಿ ಹಾಗೂ ಗಮನ ಅವಳ ಮೇಲೆ ಇದ್ದಿತು. ತನ್ನ ಯೌವನದಲ್ಲಿ ಅವಳು ಮಾತ್ಸರ್ಯ ಮತ್ತು ಕೋಪಕ್ಕೆ ಇತರ ಮಹಿಳೆಯರಿಂದ ಗುರಿಯಾಗಿದ್ದಳು. ಆದರೆ, ಸ್ವಲ್ಪ ದಿನದಲ್ಲೇ ವಿರೋಧ ವ್ಯಕ್ತವಾಯಿತು. ಓ ಮಹಿಳೆಯರು, ತಾವು ಖುಷಿಪಟ್ಟಂತೆ, ಅವಳೇಕೆ ಈಗ ಖುಷಿಪಡಲು ಇವರುಗಳು ಆಸ್ಪದ